

ನ್ಯಾಯಾಧೀಶ: ‘ಏನಯ್ಯಾ, ಮೂರು ದಿನಗಳಲ್ಲಿ ಮೂರು ಕಡೆ ಕಳ್ಳತನ ಮಾಡಿದ್ದೀಯಲ್ಲ?’
ಅಪರಾಧಿ: ಹೌದು ಸ್ವಾಮಿ, ನಾನು ಒಂದು ದಿನಕ್ಕೆ ಒಂದೇ ಕಡೆ ಕಳ್ಳತನ ಮಾಡೋದು!

★★★

ಅತಿಥಿ: ಈ ತರುಣನಿಗೆ ಏನಾಗಿದೆ? ಹಾಗೇಕೆ ನಾಯಿಯನ್ನು ಮುದ್ದಿಸುತ್ತಿದ್ದಾನೆ?!
ಹುಚ್ಚಾಸ್ಪತ್ರೆ ಮೇಲ್ವಿಚಾರಕರು: ಅವನು ಒಬ್ಬ ಹುಡುಗಿಯನ್ನು ಪ್ರೀತಿಸಿದ್ದ. ಅವಳು ಕೈ ಕೊಟ್ಟಳು. ಇವನಿಗೆ ಹುಚ್ಚು ಹಿಡಿಯಿತು!
ಅತಿಥಿ: (ಮುಂದೆ ಹೋದಂತೆ) ಇವನು ಯಾಕೆ ಬಾಗಿಲ ಸಲಾಕೆಗಳಿಗೆ ಹಣೆ ಹಚ್ಚಿಕೊಳ್ಳುತ್ತಿದಾನೆ?!
ಮೇಲ್ವಿಚಾರಕರು: ಮೊದಲು ಭೇಟಿಯಾದ ಯುವಕನ ಹುಡುಗಿಯನ್ನೇ ಇವನು ಮದುವೆಯಾದದ್ದು! ಅದಕ್ಕೆ ಹುಚ್ಚನಾಗಿದ್ದಾನೆ!

–ಚೈತ್ರಾ ಕುಕ್ಕೆಮನೆ

---

ಮೇಷ್ಟ್ರು: ಈಗ ಏನು ಮಾಡಿಕೊಂಡಿದೀಯಾ?
ಗುಂಡ: ಎಸ್‌ಐ ಸರ್...
ಮೇಷ್ಟ್ರು: ಭಲೇ... ಅಂದ್ರೆ ಸಬ್‌ಇನ್ಸ್‌ಪೆಕ್ಟರ್...?
ಗುಂಡ: ಅಲ್ಲ ಸರ್... ಸುಮ್ನೆ ಇದ್ದೀನಿ ಅಂತ!

★★★



ಮೇಷ್ಟ್ರು: ಯಾಕೋ ಗುಂಡ ಪರೀಕ್ಷೇಲಿ ಬ್ಯಾಕ್ಟೀರಿಯಾ ಚಿತ್ರ ಬಿಡಿಸಿಲ್ಲ?
ಗುಂಡ: ಬಿಡಿಸಿದೀನಿ ಸರ್...
ಮೇಷ್ಟ್ರು: ಎಲ್ಲಿ? ಬರೀ ಖಾಲಿ ಪೇಪರ್ ಇದೆ. ಏನೂ ಕಾಣ್ತಾ ಇಲ್ಲಾ...
ಗುಂಡ: ಬ್ಯಾಕ್ಟೀರಿಯಾ ಬರೀ ಕಣ್ಣಿಗೆ ಕಾಣುವುದಿಲ್ಲ ಅಂತ ನೀವೇ ಹೇಳಿದ್ರೆಲ್ಲಾ ಸರ್? ಮೈಕ್ರೋಸ್ಕೋಪಿನಿಂದ ನೋಡಿ.

★★★

ಹುಡುಗ: ಸರ್, ನನ್ನ ಫೇಲ್ ಮಾಡಿ... ನಿಮ್ಮ ಕಾಲು ಹಿಡಿತೀನಿ...
ಸರ್: ಯಾಕೋ?... ಎಲ್ರೂ ಪಾಸ್ ಮಾಡಿ ಅಂದ್ರೆ ನೀನು ಫೇಲು ಮಾಡಿ ಅಂತೀಯಾ?
ಹುಡುಗ: ನಮ್ಮಪ್ಪ ನಾನು ಪಾಸು ಆದ್ರೆ ಕಾಲೇಜಿಗೆ ಹಾಕ್ತೀನಿ, ಫೇಲ್ ಆದ್ರೆ ಮದುವೆ ಮಾಡ್ತೀನಿ ಅಂದಿದ್ದಾರೆ ಸಾರ್.

–ಹರೀಶ್ ಜಾಗಟಗೇರಿ, ಕೊಟ್ಟೂರು

CLC
COLD LASER CENTRE
The Miracle Ray
ನೋವೇ ?
ಚಿಂತೆ ಬಿಡಿ !
ಎಲ್ಲಾ ರೀತಿಯ ನೋವುಗಳಿಗೂ ಸುರಕ್ಷಿತ ಹಾಗೂ ಶಸ್ತ್ರಚಿಕಿತ್ಸೆ ರಹಿತವಾದ ಅತ್ಯಾಧುನಿಕ ತಂತ್ರಜ್ಞಾನದ "ಲೇಸರ್' ಚಿಕಿತ್ಸೆ ಲಭ್ಯ.



- ಮಂಡಿ ನೋವು,
- ಕತ್ತು ನೋವು
- ಬೆನ್ನು ನೋವು
- ಬೊಜ್ಜಿನ ಸಮಸ್ಯೆ
- ದುಶ್ಚಟಗಳ

ಉಪಶಮನಕ್ಕಾಗಿ
ಕೋಲ್ಡ್ ಲೇಸರ್
ಸೆಂಟರ್‌ನ್ನು ಸಂಪರ್ಕಿಸಿ

WALT
WORLD ASSOCIATION FOR LASER THERAPY
ವಿಶ್ವ ಲೇಸರ್ ಚಿಕಿತ್ಸಾ ಸಂಸ್ಥೆಯಿಂದ ಮಾನ್ಯತೆ ಪಡೆದು ವೃತ್ತಿಪರರಿಂದ ನಿರ್ವಹಿಸುತ್ತಿರುವ ಸಂಸ್ಥೆ

#1003/25, 4th M Block
Rajajinagar Entrance,
Near Sujatha Theater Bus Stop
Star Bazaar Circle,
Bangalore-10
enquiry@coldlasercentre.com
www.coldlasercentre.com
080-67309404
9242223335